Azim Premji University

**ಪತ್ರಿಕಾ ಪ್ರಕಟಣೆ**

## `ಉದ್ಯೋಗಶೀಲ ಭಾರತದ ಸ್ಥಿತಿಗತಿ' ಕುರಿತ
## ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾನಿಲಯದ ಚೊಚ್ಚಲ ವರದಿ

*ವೇತನ ಮಟ್ಟದಲ್ಲಿ ವರ್ಷಕ್ಕೆ ಸುಮಾರು ಶೇ.3ರಷ್ಟು ಏರಿಕೆಯಾಗಿದೆ. ಆದರೆ ಶೇ.82ರಷ್ಟು ಪುರುಷ ಉದ್ಯೋಗಿಗಳು ಮತ್ತು ಶೇ.92ರಷ್ಟು ಮಹಿಳಾ ಉದ್ಯೋಗಿಗಳು ತಿಂಗಳಿಗೆ ರೂ.10,000/-ಗಿಂತ ಕಡಿಮೆ ವೇತನ ಪಡೆಯುತ್ತಿದ್ದಾರೆ.*

**ಬೆಂಗಳೂರು, 3 ಅಕ್ಟೋಬರ್ 2018 :** `ಉದ್ಯೋಗಶೀಲ ಭಾರತದ ಸ್ಥಿತಿಗತಿ' (ಸ್ಟೇಟ್ ಆಫ್ ವರ್ಕಿಂಗ್ ಇಂಡಿಯಾ( ಕುರಿತು ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯವು ತನ್ನ ಚೊಚ್ಚಲ ವರದಿಯನ್ನು ಬೆಂಗಳೂರು ಇಂಟರ್ ನ್ಯಾಷನಲ್ ಸೆಂಟರ್ ನಲ್ಲಿ ಅಕ್ಟೋಬರ್ 3 ರಂದು ಪ್ರಸ್ತುತಪಡಿಸಿತು. ಈ ವರದಿಯನ್ನು ಸೆ.25ರಂದು ನವದೆಹಲಿಯಲ್ಲಿ ಬಿಡುಗಡೆ ಮಾಡಲಾಗಿತ್ತು. ವಿಶ್ವವಿದ್ಯಾಲಯದ ಸುಸ್ಥಿರ ಉದ್ಯೋಗ ಕೇಂದ್ರ)Centre for Sustainable Employment (CSE)(ದ ಜಾಲತಾಣದಲ್ಲಿ ಈ ವರದಿಯು ಲಭ್ಯವಿದೆ.

`ಉದ್ಯೋಗಶೀಲ ಭಾರತದ ಸ್ಥಿತಿಗತಿ'ಯು ದೇಶದ ಕಾರ್ಮಿಕ ಮಾರುಕಟ್ಟೆಯನ್ನು ಕುರಿತು ಸಂಶೋಧಕರು, ಪತ್ರಕರ್ತರು, ಸಾಮಾಜಿಕ ಹೋರಾಟಗಾರರು ಮತ್ತು ನೀತಿ ನಿರೂಪಕರು - ಇವರೆಲ್ಲರನ್ನೂ ಒಳಗೊಂಡು ಕೈಗೊಂಡ ಸಂಶೋಧನಾ ವರದಿಯಾಗಿದ್ದು ಉಪಯುಕ್ತ ವಿಶ್ಲೇಷಣಾತ್ಮಕ ದತ್ತಾಂಶಗಳ ಮೇಲೆ ಬೆಳಕು ಚೆಲ್ಲುತ್ತದೆ. ದೇಶದಲ್ಲಿನ ಉದ್ಯೋಗ ಮತ್ತು ನಿರುದ್ಯೋಗಗಳ ಪ್ರಮಾಣ, ಯಾವ್ಯಾವ ಉದ್ಯಮಗಳು ಮತ್ತು ಕ್ಷೇತ್ರಗಳು ಉದ್ಯೋಗವನ್ನು ಸೃಷ್ಟಿಸುತ್ತಿವೆ, ಉದ್ಯೋಗ ಸೃಷ್ಟಿಯಲ್ಲಿ ಯಾವ ರಾಜ್ಯಗಳು ಉತ್ತಮವಾಗಿ ಕಾರ್ಯ ನಿರ್ವಹಿಸುತ್ತಿವೆ, ಉದ್ಯೋಗಗಳ ಗುಣಮಟ್ಟ ಮತ್ತು ಜಾತಿ ಹಾಗೂ ಲಿಂಗ ತಾರತಮ್ಯಗಳ ಪರಿಣಾಮ ಮುಂತಾದ ಅಂಶಗಳ ಬಗ್ಗೆ ಒಳನೋಟಗಳನ್ನೊದಗಿಸುವ ಈ ಅಧ್ಯಯನವು ಅನೇಕ ಅಧಿಕೃತ ವರದಿಗಳು ಮತ್ತು ಕ್ಷೇತ್ರಕಾರ್ಯ ಅಧ್ಯಯನಗಳನ್ನಾಧರಿಸಿ ಪುರಾವೆಗಳನ್ನು ಕ್ರೋಢೀಕರಿಸಿದೆ.

ಉದ್ಯೋಗಕ್ಕೆ ಸಂಬಂಧಪಟ್ಟಂತೆ ಸಾರ್ವಜನಿಕ ತಿಳಿವಳಿಕೆಯನ್ನು ಹೆಚ್ಚಿಸುವುದು ಮತ್ತು ಪ್ರತಿಯೊಬ್ಬರಿಗೂ ನಿಗದಿತ ಆದಾಯವನ್ನು ಒದಗಿಸುವ ಉದ್ಯೋಗ ದೊರೆಯುವಂತಾಗಬೇಕು ಎಂಬ ನಿಟ್ಟಿನಲ್ಲಿ ಅಗತ್ಯ ನೀತಿಗಳನ್ನು ರೂಪಿಸಲು ಮಾರ್ಗದರ್ಶನ ನೀಡುವುದು ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯದ ಈ ಉಪಕ್ರಮದ ಗುರಿಯಾಗಿದೆ. ಅಲ್ಲದೆ, ಹೆಚ್ಚಿನ ಸಂಶೋಧನೆ ಮತ್ತು ಬೋಧನೆಗೆ ಅಗತ್ಯವಾದ ಅಂಕಿಅಂಶಗಳನ್ನು ವಿಶ್ವವಿದ್ಯಾಲಯವು ತನ್ನ `ಸೆಂಟರ್ ಫಾರ್ ಸಸ್ಟೈನಬಲ್ ಎಂಪ್ಲಾಯ್ಮೆಂಟ್'ನ ಜಾಲತಾಣದಲ್ಲಿ ಒದಗಿಸುತ್ತದೆ.

ಬಹುತೇಕ ವಲಯಗಳಲ್ಲಿ ಉದ್ಯೋಗಿಗಳ ವೇತನ ಮಟ್ಟವು ಗಮನಾರ್ಹವಾಗಿ ಏರಿದ್ದರೂ, ಜಾತಿ ಮತ್ತು ಲಿಂಗ ತಾರತಮ್ಯವು ತೀವ್ರ ಸ್ವರೂಪದಲ್ಲಿರುವುದನ್ನು ವರದಿ ಗುರುತಿಸಿದೆ. ವೇತನ ಏರಿಕೆಯ ಪ್ರಮಾಣಕ್ಕೆ ಹೋಲಿಸಿದರೆ ಉದ್ಯೋಗಿಗಳ ಉತ್ಪಾದಕತೆಯು ಹಲವು ಪಟ್ಟು ಹೆಚ್ಚಾಗಿದೆ. ಹೀಗಾಗಿ, ಅಭಿವೃದ್ಧಿಯಿಂದ ಉದ್ಯೋಗಿಗಳಿಗಿಂತ ಹೆಚ್ಚಾಗಿ ಉದ್ಯೋಗದಾತರು ಹೆಚ್ಚಿನ ಲಾಭವನ್ನು ಪಡೆದುಕೊಂಡಿದ್ದಾರೆ. ಅಲ್ಲದೆ, ದೇಶದಲ್ಲಿ ಉದ್ಯೋಗಸೃಷ್ಟಿ ದುರ್ಬಲವಾಗಿದ್ದು, ಉತ್ತಮ ಆರ್ಥಿಕ ಬೆಳವಣಿಗೆಯನ್ನು ಒಳ್ಳೆಯ ಉದ್ಯೋಗಸೃಷ್ಟಿಯನ್ನಾಗಿ ಪರಿವರ್ತಿಸಲಾಗದೆ ಭಾರತ ತೊಳಲಾಡುತ್ತಿದೆ. ಅದರಲ್ಲೂ ನಿರ್ದಿಷ್ಟವಾಗಿ, ವಿದ್ಯಾವಂತ ಯುವಜನರಿಗೆ ಉದ್ಯೋಗಗಳನ್ನು ಒದಗಿಸುವಲ್ಲಿ ಹಿಂದೆ ಬಿದ್ದಿದೆ.

ಈ ಬಗ್ಗೆ ಅಭಿಪ್ರಾಯ ವ್ಯಕ್ತಪಡಿಸಿರುವ ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯದ ಕುಲಪತಿ ಅನುರಾಗ್ ಬೆಹಾರ್ ``ದೇಶದ ಎಲ್ಲ ನಾಗರಿಕರಿಗೂ

ನ್ಯಾಯಯುತ ಮತ್ತು ಜೀವನ ನಿರ್ವಹಣೆಯ ಅವಕಾಶಗಳನ್ನು ಒದಗಿಸುವುದು ಭಾರತದ ಪಾಲಿಗೆ ತುಂಬಾ ಮುಖ್ಯವಾದ ಸಂಗತಿಯಾಗಿದೆ. ನಮ್ಮ ವಿಶ್ವವಿದ್ಯಾಲಯದ ಈ ವರದಿಯು ಅತ್ಯಂತ ಆಳವಾದ ಸಂಶೋಧನೆಯನ್ನು ಆಧರಿಸಿದ್ದು, ಎಲ್ಲರನ್ನೂ ಒಳಗೊಂಡು ಪೂರ್ಣ ಸಮತೆಯನ್ನು ಸಾಕಾರಗೊಳಿಸುವ ಆಶಯದಿಂದ ಉದ್ಯೋಗ ಬೆಳವಣಿಗೆಗೆ ಚಾಲನೆ ನೀಡುವ ಅಂಶಗಳನ್ನು ಪರೀಕ್ಷಿಸುತ್ತದೆ. ಈ ವರದಿಯನ್ನು ನಾವು ಮೊದಲ ಹೆಜ್ಜೆ ಎಂದಷ್ಟೇ ಭಾವಿಸಿದ್ದೇವೆ ಮತ್ತು ತಳಮಟ್ಟದಲ್ಲಿ ಇನ್ನೂ ಆಳವಾದ ಮುಂದುವರೆದ ಅಧ್ಯಯನದ ಅಗತ್ಯವಿದೆ. ಉದ್ಯೋಗ ಕ್ಷೇತ್ರಕ್ಕೆ ಸಂಬಂಧಪಟ್ಟಂತೆ ಗಾಢವಾದ ಅರಿವನ್ನು ಮೂಡಿಸಲು ಸಂಸ್ಥೆಗಳು ಮತ್ತು ವಿವಿಧ ಕ್ಷೇತ್ರಗಳೊಂದಿಗೆ ಸಹಭಾಗಿತ್ವವು ನಿರ್ಣಾಯಕ ಅಂಶವಾಗಿದೆ," ಎಂದಿದ್ದಾರೆ.

ಈ ವರದಿಯ ಪ್ರಧಾನ ಲೇಖಕರೂ ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯದ ಬೋಧಕರೂ ಆದ ಶ್ರೀ ಅಮಿತ್ ಬಸೋಲೆ ಅವರು, ``ಹಲವು ದಶಕಗಳಿಂದ ನಮ್ಮಲ್ಲಿ ಉದ್ಯೋಗಸೃಷ್ಟಿಗೆ ಅಡ್ಡಗಾಲಾಗಿ ಪರಿಣಮಿಸಿರುವ ಸಂರಚನಾ ದೋಷಗಳನ್ನು ಈ ವರದಿ ವಿಶ್ಲೇಷಣೆಗೆ ಒಳಪಡಿಸಿದೆಯಲ್ಲದೆ ಕೇವಲ ಒಂದೆರಡು ವರ್ಷಗಳ ಬೆಳವಣಿಗೆಗಳಿಗೆ ಈ ಅಧ್ಯಯನವನ್ನು ಸೀಮಿತಗೊಳಿಸಿಲ್ಲ ಎನ್ನುವುದು ಗಮನಾರ್ಹ," ಎಂದು ಹೇಳಿದ್ದಾರೆ.

**ವರದಿಯ ಪ್ರಮುಖ ಅಂಶಗಳು:**

**ಉದ್ಯೋಗರಹಿತ ಬೆಳವಣಿಗೆ:** ಭಾರತವು ಉತ್ತಮ ಆರ್ಥಿಕ ಬೆಳವಣಿಗೆಯನ್ನು ಒಳ್ಳೆಯ ಉದ್ಯೋಗಗಳಾಗಿ ಪರಿವರ್ತಿಸುವಲ್ಲಿ ಪ್ರಯಾಸ ಪಟ್ಟಿದೆ. ಸದ್ಯಕ್ಕೆ ದೇಶದ ಜಿ.ಡಿ.ಪಿ.ಯಲ್ಲಿ ಶೇಕಡ 10ರಷ್ಟು ಹೆಚ್ಚಳವಿದ್ದರೆ ಅದರಿಂದ ಸೃಷ್ಟಿಯಾಗುತ್ತಿರುವ ಉದ್ಯೋಗಗಳ ಪ್ರಮಾಣ ಶೇಕಡ 1ಕ್ಕಿಂತಲೂ ಕಡಿಮೆ ಇದೆ. ದೇಶದ ಯುವಜನರು ಮತ್ತು ಉನ್ನತ ಶಿಕ್ಷಣ ಪಡೆದವರಲ್ಲಿ ನಿರುದ್ಯೋಗದ ಪ್ರಮಾಣವು ಶೇ.16ರಷ್ಟಿದೆ.

**ಸಂಘಟಿತ ಉತ್ಪಾದನಾ ಕ್ಷೇತ್ರದಲ್ಲಿ ಚೇತರಿಕೆ:** ಕಳೆದ ದಶಕವು ದೇಶದ ಸಂಘಟಿತ ಉತ್ಪಾದನಾ ಕ್ಷೇತ್ರದ ಪಾಲಿಗೆ ಸಕಾರಾತ್ಮಕವಾಗಿತ್ತು. ಈ ಅವಧಿಯಲ್ಲಿ ಹಲವು ಉದ್ಯಮಗಳು )ಅದರಲ್ಲೂ ಹೆಣೆದ ಉಡುಪುಗಳು, ಪ್ಲಾಸ್ಟಿಕ್ ಮತ್ತು ಪಾದರಕ್ಷೆ ತಯಾರಿಕೆ ಉದ್ದಿಮೆಗಳು( ವೇತನ ಹೆಚ್ಚಳ ಮತ್ತು ಉದ್ಯೋಗ ಸೃಷ್ಟಿ ಎರಡು ಆಯಾಮಗಳಲ್ಲೂ ಒಳ್ಳೆಯ ಸಾಧನೆ ಮಾಡಿವೆ. 1980 ಮತ್ತು 1990ರ ದಶಕಗಳಲ್ಲಿ ಈ ಉದ್ದಿಮೆಗಳಲ್ಲಿ ಹೆಚ್ಚು ಯಾಂತ್ರೀಕೃತ ವ್ಯವಸ್ಥೆಯ ಅನುಷ್ಠಾನದ ಪರಿಣಾಮವಾಗಿ ಕಂಡುಬಂದಿದ್ದ ಉದ್ಯೋಗ ನಷ್ಟದ ಪ್ರಮಾಣ ಅಷ್ಟೊಂದು ಹೆಚ್ಚಿನ ಮಟ್ಟದಲ್ಲಿಲ್ಲದಿದ್ದುದು ಕೂಡ ಇದಕ್ಕೆ ಭಾಗಶಃ ಕಾರಣವಾಗಿದೆ.

**ಹೆಚ್ಚಿದ ಅನಿಶ್ಚಿತ ಪರಿಸ್ಥಿತಿ:** ಆದರೆ, ಸಂಘಟಿತ ವಲಯದಲ್ಲಿ ಉದ್ಯೋಗವು ಹೆಚ್ಚು ಅನಿಶ್ಚಿತತೆಯಿಂದ ಕೂಡಿದೆ. ಏಕೆಂದರೆ, ಮೊದಲಿದ್ದ ಖಾಯಂ ಉದ್ಯೋಗಿಗಳ ಬದಲಾಗಿ ಇತ್ತೀಚಿನ ವರ್ಷಗಳಲ್ಲಿ ಇಲ್ಲೆಲ್ಲ ಹಲವು ರೂಪಗಳಲ್ಲಿ ಗುತ್ತಿಗೆ ಆಧಾರದ ನೇಮಕಾತಿಗಳು ಮತ್ತು ತರಬೇತಿ ಉದ್ಯೋಗಿಗಳನ್ನು ತೆಗೆದುಕೊಳ್ಳುವ ಪ್ರವೃತ್ತಿ ಹೆಚ್ಚಾಗುತ್ತಿದ್ದು ಇವರು ಖಾಯಂ ಉದ್ಯೋಗಿಗಳು ಮಾಡುವ ಕೆಲಸವನ್ನೇ ಭಾಗಶ: ವೇತನ ಪಡೆದು ಮಾಡುತ್ತಿದ್ದಾರೆ.

**ವೇತನದಲ್ಲಿ ಹೆಚ್ಚಳವಿದ್ದರೂ ಯಾವುದೇ ವೇತನ ನಿಯಮಾವಳಿಗಿಂತ ಕಡಿಮೆ** : ಕಳೆದ ಒಂದೂವರೆ ದಶಕದಲ್ಲಿ ದೇಶದ ಔದ್ಯಮಿಕ ವಲಯದಲ್ಲಿ )ಹಣದುಬ್ಬರಕ್ಕೆ ಹೊಂದಿಸಿದಂತೆ( ವೇತನವೇನೋ ಹೆಚ್ಚಾಗಿದೆ ನಿಜ. ಅದರಲ್ಲೂ ಕೃಷಿ ವಲಯವನ್ನು ಬಿಟ್ಟರೆ ಬಹುತೇಕ ವಲಯಗಳು ವಾರ್ಷಿಕ ಶೇಕಡ 3 ಅಥವಾ ಅದಕ್ಕಿಂತ ಹೆಚ್ಚಿನ ವೇತನ ಏರಿಕೆಯನ್ನು ದಾಖಲಿಸಿವೆ. ಆದರೆ, ಉದ್ಯೋಗಿಗಳ ಸರಾಸರಿ ಮಾಸಿಕ ಆದಾಯ ಮಾತ್ರ ಒಟ್ಟಾರೆಯಾಗಿ ಕಡಿಮೆಯಾಗಿದೆ. ಅದರಲ್ಲೂ ಶೇ.82ರಷ್ಟು ಪುರುಷ ಮತ್ತು ಶೇ.92ರಷ್ಟು ಮಹಿಳಾ ಉದ್ಯೋಗಿಗಳ ಮಾಸಿಕ ವೇತನ 10 ಸಾವಿರ ರೂ.ಗಳಿಗಿಂತಲೂ ಕಡಿಮೆ ಇದೆ.

**ಜಾತಿ ಮತ್ತು ಲಿಂಗ ತಾರತಮ್ಯ:** ಜಾತಿ ಮತ್ತು ಲಿಂಗ ತಾರತಮ್ಯಗಳು ಹೆಚ್ಚಿನ ಪ್ರಮಾಣದಲ್ಲೇ ಇವೆ. ಸೇವಾ ವಲಯದಲ್ಲಿ ಈಗಲೂ ಕೇವಲ ಶೇ.16ರಷ್ಟು ಮಹಿಳೆಯರು ಕಾರ್ಯ ನಿರ್ವಹಿಸುತ್ತಿದ್ದರೆ, ಮನೆಗೆಲಸದಲ್ಲಿ ತೊಡಗಿಕೊಂಡಿರುವ ಮಹಿಳೆಯರ ಪ್ರಮಾಣ ಶೇ.60ರಷ್ಟಿದೆ. ಇದೇ ರೀತಿ ಒಟ್ಟಾರೆ ಉದ್ಯೋಗಗಳಲ್ಲಿರುವವರಲ್ಲಿ ಪರಿಶಿಷ್ಟ ಜಾತಿಗೆ ಸೇರಿದವರ ಪ್ರಮಾಣ ಕೇವಲ ಶೇ.18.5ರಷ್ಟಿದ್ದರೂ, ಚರ್ಮೋದ್ಯಮದಲ್ಲಿ ತೊಡಗಿಕೊಂಡಿರುವ ಪರಿಶಿಷ್ಟ ಜಾತಿಯವರ ಪ್ರಮಾಣ ಶೇ.46ರಷ್ಟಿದೆ. ಸಕಾರಾತ್ಮಕ ಸಂಗತಿಯೆಂದರೆ, ಕಾಲ ಕಳೆದಂತೆ ವೇತನದಲ್ಲಿನ ಲಿಂಗ ತಾರತಮ್ಯತೆ ಕಡಿಮೆಯಾಗುತ್ತಿದೆ.

ಕೇಂದ್ರ ಸರಕಾರವು ಕೆಳಕಂಡ ಅಂಶಗಳನ್ನು ಪರಿಗಣನೆಗೆ ತೆಗೆದುಕೊಂಡು ರಾಜ್ಯ ಸರಕಾರಗಳ ಸಹಭಾಗಿತ್ವದೊಂದಿಗೆ `ರಾಷ್ಟ್ರೀಯ

ಉದ್ಯೋಗ ನೀತಿ'ಯನ್ನು ರೂಪಿಸಬೇಕೆಂದು ಈ ವರದಿ ಪ್ರಸ್ತಾಪಿಸುತ್ತದೆ.

- ಉದ್ಯೋಗ ಖಾತ್ರಿಯ ಪರಿಕಲ್ಪನೆ ಜಗತ್ತಿನಾದ್ಯಂತ ದಿನದಿಂದ ದಿನಕ್ಕೆ ಹೆಚ್ಚು ಪ್ರಚಲಿತಗೊಳ್ಳುತ್ತಿದೆ. ಈಗಾಗಲೇ `ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ'(ಮನರೇಗಾ(ಯನ್ನು ಹೊಂದಿರುವ ಭಾರತವು ಈ ವಿಷಯದಲ್ಲಿ ಮೇಲ್ಪಂಕ್ತಿಯನ್ನು ಹಾಕಿಕೊಟ್ಟಿದ್ದು ತನ್ನ ಅನುಭವದ ಆಧಾರದ ಮೇಲೆ ಮುಂದಡಿ ಇಡಬೇಕು.
- ಕೈಗಾರಿಕಾ ನೀತಿಯಲ್ಲಿ ಈಗ ವೇತನ ಸಬ್ಸಿಡಿ ಮತ್ತು ಉದ್ಯೋಗಿಗಳ ಕೌಶಲ್ಯ ವೃದ್ಧಿಸಲು ಉತ್ತೇಜಕಗಳನ್ನು ನೀಡುವ ಅಂಶಗಳಿಗೆ ಸಂಬಂಧಿಸಿದಂತೆ ಹೊಸ ಬಗೆಯ ಆಸಕ್ತಿ ಮೂಡುತ್ತಿದೆ.
- ರಾಜ್ಯಗಳು ಅಳವಡಿಸಿಕೊಂಡಿರುವ ಯಶಸ್ವಿ ಉದ್ಯೋಗ ನೀತಿಗಳನ್ನು ವಿಶ್ಲೇಷಿಸಿ, ಇಂಥ ವೈವಿಧ್ಯಮಯ ಅನುಭವಗಳಿಂದ ಉಪಯುಕ್ತವಾದುವನ್ನು ಅಳವಡಿಸಿಕೊಳ್ಳಬೇಕಾದ ಅಗತ್ಯವಿದೆ.
- ಯಥೇಚ್ಛವಾದ ಆರ್ಥಿಕ ಅವಕಾಶಗಳನ್ನು ಸಾರ್ವಜನಿಕ ಹೂಡಿಕೆಗಾಗಿ ಬಳಸಿಕೊಂಡು ಅರ್ಥವ್ಯವಸ್ಥೆಯಲ್ಲಿ, ಅದರಲ್ಲೂ ಅತ್ಯಂತ ಜರೂರಾಗಿ ಕೃಷಿ ಕ್ಷೇತ್ರದಲ್ಲಿ ಆದಾಯ ಮಟ್ಟ ಹೆಚ್ಚಿಸುವ ಅಗತ್ಯವಿದೆ.
- ಶಿಕ್ಷಣ, ಆರೋಗ್ಯ, ವಸತಿ, ಸಾರ್ವಜನಿಕ ಸಾರಿಗೆ ಮತ್ತು ಸುರಕ್ಷತೆ ಕ್ಷೇತ್ರಗಳಲ್ಲಿ ಬಂಡವಾಳ ಹೂಡಿಕೆಗೆ ಅವಕಾಶ ಮಾಡಿಕೊಡುವ ಹಾಗೂ ಉದ್ಯೋಗ ಸೃಷ್ಟಿ, ಮಾನವ ಬಂಡವಾಳ ಮತ್ತು ಸಾರ್ವಜನಿಕ ಸರಕುಗಳಿಗೆ `ಸಾರ್ವತ್ರಿಕ ಮೂಲಭೂತ ಸೇವೆಗಳು' (ಯೂನಿವರ್ಸಲ್ ಬೇಸಿಕ್ ಸರ್ವೀಸಸ್( ಎನ್ನುವ ಕಾರ್ಯಕ್ರಮವನ್ನು ರೂಪಿಸಲು ಬಲವಾದ ಕಾರಣಗಳಿವೆ.

ಈ ಅಧ್ಯಯನ ವರದಿಗೆ ಹಿನ್ನೆಲೆಯಾಗಿ ಲಭ್ಯವಿರುವ ವಿವರಗಳನ್ನೊಳಗೊಂಡ ಎರಡನೇ ಸಂಪುಟವನ್ನು ಸದ್ಯದಲ್ಲೇ ಪ್ರಕಟಿಸಲಾಗುವುದು.

**(Please use Ready template here)**

**About Azim Premji University**

Azim Premji University was established as a not-for-profit, private university under the Azim Premji University Act 2010. The University has a clear social purpose of working towards a just, equitable, humane and sustainable society. Azim Premji University plays a critical role in developing new talent, building capacity in existing functionaries and creating domain knowledge in the fields of education and in development. The Azim Premji Foundation is the sponsor of the University. The roots of Azim Premji University lie in the learning and experience of a decade of work in elementary education by Azim Premji Foundation. The University is one of the Foundation’s key responses to the challenges confronting the education and development sectors in India.

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ :

ಸಚಿನ್ ಮುಳೆ – sachin.mulay@apu.edu.in | +91 9845329164